# ಕನ್ನಡ ಜಾನಪದ ರಂಗಭೂಮಿಯ ಪರಂಪರೆ

**ಗಾದೆಪ್ಪ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ವಿಜಯನಗರ ಮಹಾವಿದ್ಯಾಲಯ, ಹೊಸಪೇಟೆ.

DOI: https://doi.org/10.5281/zenodo.17255659

## ABSTRACT:

ಬದುಕಿನ ಅಸಂಖ್ಯ ಪಾಠಗಳ ಗಣಿ ರಂಗಭೂಮಿ. ಅದರ ಆಳಕ್ಕಿಳಿದಷ್ಟು ಅನುಭವಗಳ ಸುರಳಿ ಬಿಚ್ಚಿಕೊಳ್ಳುತ್ತದೆ. ಶತಮಾನಗಳ ಹಿಂದೆ ತನ್ನ ಸ್ವರೂಪವನ್ನು ಕಟ್ಟಿಕೊಂಡಿದ್ದರೂ, ವಿಭಿನ್ನ ಕಾಲಘಟ್ಟಗಳ ಮನೋಧರ್ಮಗಳಿಗೆ ಅನುಗುಣವಾಗಿ ಹಲವು ಹತ್ತು ಮಾರ್ಪಾಡುಗಳಿಗೆ ಒಳಗಾಗುತ್ತಾ ಇಂದಿಗೂ ತನ್ನ ಬೇರುಗಳನ್ನು ಉಳಿಸಿಕೊಂಡಿದೆ ರಂಗಭೂಮಿ. ಬದುಕಿನ ಬವಣೆಗಳನ್ನೇ ತಮ್ಮ ಅನುಭವದ ಮೂಲಕ ಮನರಂಜನೆಯನ್ನಾಗಿಸಿಕೊಂಡ ಜಾನಪದ ರಂಗಭೂಮಿ, ಹಗಲು ರಾತ್ರಿ ತಾಲೀಮು ನಡೆಸಿ ವಿಶಿಷ್ಟ ಪ್ರಯೋಗಗಳನ್ನು ನೀಡಿದ ರಂಗಭೂಮಿ. ಈ ಜಾನಪದ ರಂಗಭೂಮಿಯು ಪರಂಪರೆಯ ಮುಂದುವರಿಕೆಗೆ ನೀಡಿದ ಕೊಡುಗೆಗಳು ಅಷ್ಟಿಷ್ಟಲ್ಲ. ಅಲ್ಲಿ ಜಾನಪದೀಯ ಸೊಗಡಿತ್ತು; ವಿಭನ್ನ ಕಾಲಘಟ್ಟದ ಸಾಮಾಜಿಕ ಚಹರೆಗಳಿದ್ದವು; ಬದುಕಿನ ವಿವಿಧ ಆಯಾಮಗಳಿದ್ದವು; ಪ್ರೇಕ್ಷಕರಿಗೆ ರಸದೌತಣ ಉಣಬಡಿಸುವ ಉದ್ದೇಶವಿತ್ತು; ನೈತಿಕ ಮೌಲ್ಯವನ್ನು ಸಾರುವ ಸಾಮಾಜಿಕ ಹೊಣೆಗಾರಿಕೆಯಿತ್ತು; ಸಾಮಾಜಿಕ ಜಾಗೃತಿಯನ್ನು ಮೂಡಿಸುವ ಕಳಕಳಿಯಿತ್ತು; ಅದನ್ನೊಂದು ವೇದಿಕೆಯನ್ನಾಗಿ ಬಳಸಿಕೊಂಡು ತಾನು ಮುಖ್ಯ ವಾಹಿನಿಯಲ್ಲಿ ಕಾಣಿಸಿಕೊಳ್ಳಬೇಕೆಂಬ ಹಂಬಲವಿತ್ತು; ಏನಾದರೂ ಸರಿ ರಂಗಭೂಮಿಯನ್ನು ಉಳಿಸಿ ಬೆಳೆಸೋಣ ಎನ್ನುವ ಹುಂಬುತನವಿತ್ತು ಇವೆಲ್ಲವೂ ಕನ್ನಡ ರಂಗಭೂಮಿಯನ್ನು ಹುಟ್ಟುಹಾಕಿವೆ, ಬೆಳೆಸಿವೆ ಮತ್ತು ಉಳಿಸಿವೆ. ಇವುಗಳನ್ನು ಅರಿತುಕೊಳ್ಳಬೇಕಾದರೆ ರಂಗಭೂಮಿಯ ಪರಂಪರೆಯನ್ನು ಚಾರಿತ್ರಿಕ ಕ್ರಮದ ಮೂಲಕ ನೋಡಿದರೆ ಸಾಕಾಗುವುದಿಲ್ಲ. ರಂಗಭೂಮಿಯ ನಿಜವಾದ ಚರಿತ್ರೆಯನ್ನು ಅರಿಯಬೇಕಾದರೆ ಅದಕ್ಕಾಗಿ ದುಡಿದ ಜೀವಗಳ ಅನುಭವ ಕಥನಗಳನ್ನು ಅವಲೋಕಿಸಬೇಕು. ಆ ಜೀವಗಳ ಕಷ್ಟಕಾರ್ಪಣ್ಯಗಳನ್ನು, ಸುಖಸಂತೋಷಗಳನ್ನು, ಏಳುಬೀಳುಗಳನ್ನು ಅರಿತುಕೊಳ್ಳಬೇಕು. ಅವರ ತವಕತಲ್ಲಣಗಳನ್ನು ಅರ್ಥೈಸಿಕೊಳ್ಳಬೇಕು. ನಟನೆಯ ಹಿಂದಿನ ತಾಲೀಮನ್ನು, ತೆರೆಯ ಹಿಂದಿನ ವಾಸ್ತವವನ್ನು, ಬಣ್ಣದ ಹಿಂದಿನ ಬದುಕನ್ನು, ಬೆಳಕಿನ ಕೆಳಗಿನ ನೆರಳನ್ನು ಸೂಕ್ಷ್ಮವಾಗಿ ಅವಲೋಕಿಸಬೇಕು. ಅವುಗಳನ್ನು ಮತ್ತೆ ಮತ್ತೆ ಪುನರ್ ಮೌಲ್ಯೀಕರಣಕ್ಕೆ ಒಳಪಡಿಸಬೇಕು. ಹಾಗಾದಾಗ ಮಾತ್ರ ರಂಗಭೂಮಿಯ ನಿಜವಾದ ಚರಿತ್ರೆಯನ್ನು ಕಟ್ಟಿಕೊಡಲು ಸಾಧ್ಯವಾಗುತ್ತದೆ.

## KEYWORDS:

ರಂಗಭೂಮಿ, ಜಾನಪದ, ಕಳಕಳಿ, ಕಥನ, ಸೊಗಡು, ಹೊಣೆಗಾರಿಕೆ, ವಾಹಿನಿ, ಕಾಲಘಟ್ಟ.

**ರಂಗಭೂಮಿಯ ಇತಿಹಾಸ ಮತ್ತು ಸ್ವರೂಪ:**

'ಭಾರತ ವಿವಿಧ ಭಾಷೆ, ಜನಾಂಗ, ಸಂಸ್ಕೃತಿಯನ್ನು ಹೊಂದಿದ ದೇಶ' ಎನ್ನುವುದು ನಮಗೆಲ್ಲ ತಿಳಿದಿರುವ ಸಂಗತಿ. ಇಲ್ಲಿನ ಪ್ರತಿಯೊಂದು ಜನಾಂಗವು ತನ್ನ ಭಾಷೆ ಮತ್ತು ಹಲವಾರು ಪ್ರದರ್ಶನ ಕಲೆಗಳ ಮೂಲಕ ತನ್ನ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿವೆ. ಹಿಂದಿನ ಕಾಲದಲ್ಲಿ ಅಕ್ಷರ ಮಾಧ್ಯಮವು ಸಮಾಜದ ಎಲ್ಲಾ ಸ್ತರದ ಜನಾಂಗಗಳನ್ನು ಒಳಗೊಂಡಿರಲಿಲ್ಲ. ಹಾಗಾಗಿ ಅವರ ಸಂವಹನ ಬಹುಪಾಲು ಮೌಖಿಕ ರೂಪದಲ್ಲಿಯೇ ನಡೆಯುತ್ತಿತ್ತು. ತಮ್ಮ ಪೂರ್ವದ ಮತ್ತು ಪೂರ್ವಿಕರ ಚರಿತ್ರೆಯನ್ನೂ ಸಹ ಅವರು ಮೌಖಿಕವಾಗಿ ಕಟ್ಟಿಕೊಂಡಿದ್ದರು. ಅದು ಹೆಚ್ಚಾಗಿ ಹಾಡಿನ ರೂಪದಲ್ಲಿ, ಕಥೆಗಳ ರೂಪದಲ್ಲಿತ್ತು. ವಿಚಿತ್ರವೆಂದರೆ ಅನೇಕಬಾರಿ ಇವುಗಳೇ ಅವರ ಮನರಂಜನೆಗೆ ಮಾಧ್ಯಮಗಳೂ ಆಗಿದ್ದವು. ಕಾಲಕಳೆದಂತೆ, ಮಾನವನ ಬೌದ್ಧಿಕತೆಯ ವಿಕಾಸವಾದಂತೆ ಶ್ರವ್ಯರೂಪದಲ್ಲಿದ್ದ ಅವು ದೃಶ್ಯ ರೂಪವನ್ನು ಪಡೆದುಕೊಳ್ಳಲಾರಂಭಿಸಿದವು. ಅದರ ಭಾಗವಾಗಿ ಬಂದದ್ದೇ ರಂಗಭೂಮಿ. ಹಾಗಾಗಿ ಈ ನೆಲದ ರಂಗಭೂಮಿಯ ಚರಿತ್ರೆ ಬಹು ವೈಶಿಷ್ಟ್ಯದಿಂದ, ಬಹು ಕುತೂಹಲದಿಂದ ಕೂಡಿದೆ. ಇಂತಹ ಆಸಕ್ತಿದಾಯಕ ಮಾಧ್ಯಮವೊಂದು ಯಾವುದೋ ಒಂದು ವಿಶಿಷ್ಟ ಗಳಿಗೆಯಲ್ಲಿ ಹುಟ್ಟಿ, ನಂತರದಲ್ಲಿ ಅದು ಬದಲಾದ ಕಾಲಕ್ಕನುಗುಣವಾಗಿ ಯಾವ್ಯಾವ ಬಗೆಯಲ್ಲಿ ತನ್ನ ಹೊಸ ಹೊಸ ರೂಪವನ್ನು ತಳೆಯುತ್ತಾ ಬಂದಿತೆನ್ನುವುದನ್ನು ಇಲ್ಲಿ ಅವಲೋಕಿಸಲಾಗಿದೆ.

ದೃಶ್ಯ ಮಾಧ್ಯಮವಾದ ರಂಗಭೂಮಿ ಎಲ್ಲಾ ಜನಾಂಗವನ್ನು ಒಳಗೊಂಡ ಕಲೆಯಾಗಿರುವಂತೆ, ಹಲವಾರು(ಸಾಹಿತ್ಯ, ಸಂಗೀತ, ನೃತ್ಯ, ಹಾಡು) ಕಲೆಗಳನ್ನು ಒಳಗೊಂಡ ಮಾಧ್ಯಮವೂ ಆಗಿದೆ. ಈ ಮಾಧ್ಯಮವು ಜನರಿಗೆ ಮನೋರಂಜನೆಯ ಜೊತೆಗೆ ಸಾಂಸ್ಕೃತಿಕ ಮೌಲ್ಯಗಳನ್ನು ಪ್ರಚಾರ ಮಾಡುವ ಮತ್ತು ನೈತಿಕ ಪ್ರಜ್ಞೆಯನ್ನು ಜಾಗೃತಗೊಳಿಸುವ ಪ್ರಬಲ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಹಾಗಾಗಿ ರಂಗಭೂಮಿ ಎನ್ನುವುದು ಒಂದು ಸಾಮಾಜಿಕ ಕಲಾಸಂಸ್ಥೆ.

ಪ್ರಾಚೀನ ಗ್ರೀಕ್ ನಾಟಕ ಪರಂಪರೆಗಿಂತ ಸಂಸ್ಕೃತ ನಾಟಕ ಪರಂಪರೆ ಹಳೆಯದು ಎಂದು ಹೇಳಲಾಗುತ್ತದೆ. ಆದರೆ ಸಂಸ್ಕೃತದ ದಟ್ಟ ಪ್ರಭಾವವಿರುವ ಕನ್ನಡದಲ್ಲಿ ದೊರೆಯುವ(ಕನ್ನಡ) ಮೊದಲನೆಯ ನಾಟಕವೆಂದರೆ ಹದಿನೇಳನೆಯ ಶತಮಾನದ ಕೊನೆಯ ಭಾಗದಲ್ಲಿ ರಚಿತವಾದ ಸಿಂಗಾರಾರ್ಯನ 'ಮಿತ್ರವಿಂದಾ ಗೋವಿಂದ'. ಅಧಿಕೃತವಾಗಿ ಇದು ಕನ್ನಡದ ಮೊದಲನೆ ಉಪಲಬ್ಧ ನಾಟಕ. ಆದರೆ ರಂಗ ಪ್ರಕ್ರಿಯೆ ಎನ್ನುವುದು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿತ್ತು ಎನ್ನುವುದಕ್ಕೆ ಅನೇಕ ಸಾಹಿತ್ಯಿಕ ಸಾಕ್ಷ್ಯಾಧಾರಗಳು ನಮಗೆ ಲಭ್ಯವಿವೆ. ಅವುಗಳಲ್ಲಿ ಅತ್ಯಂತ

ಪ್ರಮುಖವಾದುದು ತಮಿಳಿನ ಶಿಲಪ್ಪಧಿಗಾರಂ ಗ್ರಂಥದಲ್ಲಿ ಉಲ್ಲೇಖಿಸಲ್ಪಟ್ಟ ಅಂಶ. ಇದಲ್ಲದೆ ಪ್ರಾಚೀನ ಕನ್ನಡ ಸಾಹಿತ್ಯದಲ್ಲೂ ಸಹ ರಂಗಭೂಮಿಯ ಕುರಿತಾದ ಅನೇಕ ಉಲ್ಲೇಖಗಳು ನಮಗೆ ದೊರೆಯುತ್ತವೆ.

ವೈಕುಂಠರಾಜು ಅವರು ತಮ್ಮ ಲೇಖನಗಳಲ್ಲಿ ಕನ್ನಡ ನಾಟಕಗಳ ಇತಿಹಾಸ ಮತ್ತು ರಂಗಭೂಮಿಯ ಇತಿಹಾಸಗಳೆರಡೂ ಬೇರೆ ಬೇರೆ ಎಂದೇ ಪರಿಗಣಿಸುತ್ತಾರೆ. ಅದಕ್ಕೆ ಅವರು ಕೊಡುವ ಕಾರಣ ಈ ಮುಂದಿನಂತಿದೆ. ''ನಾಟಕದ ಹಸ್ತಪ್ರತಿ ಅಥವಾ ಮುದ್ರಿತ ಪ್ರತಿ, ನಾಟಕದ ವಸ್ತುವಿನ ಕಾಲ ಸೂಚಿಸಬಹುದು. ಹೆಚ್ಚೆಂದರೆ, ನಾಟಕಕಾರ ಸಮಕಾಲೀನ ಅಂಶಗಳನ್ನು ತನ್ನ ಕೃತಿಯಲ್ಲಿ ಅಳವಡಿಸಿದ್ದರೆ, ಆ ಕಾಲವನ್ನು ನಿಗದಿಪಡಿಸಬಹುದು. ಆದರೆ ರಂಗದ ಮೇಲೆ ನಡೆಯುವ ಪ್ರಯೋಗದ ಕಾಲ ಆ ಕ್ಷಣದ್ದು. ಪ್ರೇಕ್ಷಕ ರಂಗಮಂಚದ ಮೇಲೆ ನಾಟಕ ನೋಡುತ್ತಿರುವಾಗ ಆ ನಾಟಕದ ವಸ್ತುವಿನ ಕಾಲಕ್ಕೆ ಸರಿಯುತ್ತಾನೆ. ಹಾಗಾಗಿ ಪ್ರಯೋಗ ಸದಾ ವರ್ತಮಾನದ್ದಾಗಿರುತ್ತದೆ. ನಾಟಕದ ಹಸ್ತಪ್ರತಿ ಭೂತಕಾಲದ್ದಾಗುತ್ತದೆ. ನಾಟಕದ ಹಸ್ತಪ್ರತಿ ಸಾಹಿತ್ಯದ ಅಂಶಗಳನ್ನು ಒಳಗೊಂಡಿರುತ್ತದೆ. ಅದರ ಸಲುವಾಗಿ ನಾಟಕದ ಪ್ರತಿಯನ್ನು ಸಾಹಿತ್ಯಿಕ ದೃಷ್ಟಿಯಿಂದ ನೋಡಬೇಕೇ ಹೊರತು ಕಲೆಯ ದೃಷ್ಟಿಯಿಂದಲ್ಲ. ಆದರೆ ಅದೇ ನಾಟಕ ಪ್ರಯೋಗವನ್ನು ವಿಮರ್ಶಿಸುವಾಗ ಸಾಹಿತ್ಯ ವಿಮರ್ಶೆಯ ಸೂತ್ರಗಳನ್ನು ಅಳವಡಿಸಲು ಬರುವುದಿಲ್ಲ. ಅದೇ ರೀತಿ ಒಂದು ಒಳ್ಳೆಯ ನಾಟಕ ಒಳ್ಳೆಯ ಪ್ರಯೋಗವೂ ಆಗುತ್ತದೆಂದು ಹೇಳಲಾಗುವುದಿಲ್ಲ. ಹಾಗೆಯೇ ಕೆಟ್ಟ ನಾಟಕ ಪ್ರಯೋಗ ಕೆಟ್ಟದಾಗಿರುತ್ತದೆ ಎಂದು ಹೇಳುವಂತಿಲ್ಲ. ಅದು ನಿರ್ದೇಶಕರ ಕೈಯಲ್ಲಿ ಬೇಕಾದ ರೂಪ ಪಡೆಯಬಹುದು". ಸತೀಶ ಶಿಲೆ, 2004:19 ಈ ಮೇಲಿನ ಮಾತುಗಳು ನಾಟಕವಿಲ್ಲದ ರಂಗಭೂಮಿಯನ್ನು ಚರಿತ್ರೆಯನ್ನು ಕಟ್ಟಿಕೊಳ್ಳಲು ಸಾಧ್ಯವಿಲ್ಲ. ಆದರೆ ರಂಗಭೂಮಿಯನ್ನು ಹೊರತುಪಡಿಸಿಯೂ ನಾಟಕದ ಚರಿತ್ರೆಯನ್ನು ಕಟ್ಟಿಕೊಳ್ಳಬಹುದು ಎನ್ನುವುದನ್ನು ಪ್ರತಿಪಾದಿಸುತ್ತವೆ. ಲಿಖಿತ (ಹಸ್ತಪ್ರತಿ ಅಥವಾ ಮುದ್ರಿತ ಪ್ರತಿ)ಪಠ್ಯವನ್ನು ಆಧರಿಸಿದ ನಾಟಕಗಳ ಪ್ರಯೋಗದ ದೃಷ್ಟಿಯಿಂದ ನೋಡಿದಾಗ ಇದು ಸರಿ ಎನ್ನಬಹುದು. ಆದರೆ ಜಾನಪದ ರಂಗಭೂಮಿಯ ಚರಿತ್ರೆಗೆ ಇದನ್ನು ಅನ್ವಯಿಸುವುದು ಕಷ್ಟ. ಈಗಾಗಲೇ ಅನುಕರಣ, ಕಥನಕಲೆ ಅಥವಾ ವಾಚನ ಪರಂಪರೆ ಮತ್ತು ಕ್ರಿಯಾಚರಣೆಗಳ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಆದಿಮಾನವನ ವಾಸ್ತವಿಕ ಘಟನೆಯನ್ನು ಪುನಃ ಸೃಷ್ಟಿಸುವ ಮೂಲಕ ಆ ಘಟನೆಯನ್ನು ಇನ್ನಷ್ಟು ಅರ್ಥೈಸಿಕೊಳ್ಳುವ ಪ್ರವೃತ್ತಿಯಲ್ಲಿ ಅಪ್ರಜ್ಞಾಪೂರ್ವಕವಾಗಿಯೇ ಕಲೆ ಅಥವಾ ನಾಟಕದ ಉಗಮವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಅಂದರೆ ಅನುಕರಣೆ ಮತ್ತು ರಂಜನೆ ರಂಗಭೂಮಿಯ ಮೂಲಾಂಶಗಳು ಎನ್ನುವಂತಹದ್ದು ಸ್ಪಷ್ಟ. ಈ ಎರಡು ಮಾನವನ ಹುಟ್ಟುಗುಣಗಳೇ. ಆದುದರಿಂದ ರಂಗಭೂಮಿಯ ಉಗಮವು ಹೆಚ್ಚು ಕಡಿಮೆ

ಮಾನವನೊಂದಿಗೆಯೇ ಅಸ್ತಿತ್ವಕ್ಕೆ ಬಂದಿರಬಹುದು. ಆದ್ದರಿಂದ ಇಲ್ಲಿ ಉಗಮ ಎಂದಾಗ ನಾವು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು ರಂಗಾಭಿನಯವನ್ನು, ಈ ರಂಗಾಭಿನಯ ಒಂದು ಸಾಮಾಜಿಕ ಕಲೆಯಾಗಿ ವಿಕಾಸಗೊಂಡದ್ದು ಯಾವಾಗ ಎನ್ನುವ ಪ್ರಶ್ನೆಯು ನಮ್ಮೆದುರಿಗೆ ನಿಲ್ಲುತ್ತದೆ. ಹೀಗಾಗಿ ಜಾನಪದ ರಂಗಭೂಮಿಯ ಚರಿತ್ರೆಯನ್ನು ಖಚಿತವಾಗಿ ಇಲ್ಲಿಂದಲೇ ಆರಂಭವಾಯಿತು ಎಂದು ಗುರುತಿಸುವುದು ಕಷ್ಟ. ಒಂದರ್ಥದಲ್ಲಿ ಜಾನಪದ ರಂಗಭೂಮಿ ಎನ್ನುವುದು ಮನುಷ್ಯನ ಹಾವಾಭಾವಗಳೊಂದಿಗೆ, ಅವನ ಭಾವಾಭಿವ್ಯಕ್ತಿಗಳೊಂದಿಗೆ, ಬದುಕಿನ ಘಟನಾವಳಿಗಳೊಂದಿಗೆ ಬೆರೆತು ಹೋಗಿದೆ.

**ಜಾನಪದ ರಂಗಭೂಮಿ:**

ಜಾನಪದ ರಂಗಭೂಮಿ ಹೆಚ್ಚು ಪ್ರಾಚೀನವಾದುದು. ಅಲ್ಲದೆ ಎಲ್ಲಾ ಶಿಷ್ಟ ಕಲೆಗಳ ಹಾಗೂ ಸಾಹಿತ್ಯದ ಮೂಲ ಜಾನಪದವೇ ಎನ್ನುವುದು ಸವೆದು ಹೋದ ಮಾತಾದರೂ ಸತ್ಯ. ಜಾನಪದ ರಂಗಭೂಮಿ ಎಂದರೆ ಜನಸಾಮಾನ್ಯರ ಮನೋರಂಜನೆಗಾಗಿ, ನೈತಿಕ ಶಿಕ್ಷಣ ನೀಡುವ ಸಾಧನವಾಗಿ, ವಿಶಿಷ್ಟ ಸಂದರ್ಭದ ಕ್ರಿಯಾಚರಣೆಗಳ ಪ್ರತೀಕವಾಗಿ ಮೈತಳೆದ ರಂಗಭೂಮಿ ಎನ್ನಬಹುದು. ರಾಜಮಹಾರಾಜರ ಆಸ್ಥಾನ ಪಂಡಿತರಿಗಾಗಿ ಸೃಷ್ಟಿಯಾದ ರಂಗಾಭಿನಯಕ್ಕಿಂತ ಭಿನ್ನವಾದ ರಂಗಭೂಮಿ ಜಾನಪದ ರಂಗಭೂಮಿ. ಇದಕ್ಕೆ ಸಂಗೀತ, ನೃತ್ಯ ಮತ್ತು ಗೀತೆಗಳೇ ಜೀವಶಕ್ತಿಗಳಾಗಿದ್ದವು. ಜಾನಪದ ವೈವಿಧ್ಯಮಯ ನೃತ್ಯಗಳೇ ಇದಕ್ಕೆ ಅಡಿಪಾಯ. ದೇವತಾರಾಧನೆ, ಉಪಾಸನೆ, ಅತಿಮಾನುಷ ಶಕ್ತಿಗಳ ಅನುಕರಣೆ ಮೊದಲಾದ ಸಾಂಪ್ರದಾಯಿಕ ಆಚರಣೆಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಹಾಡು, ಕುಣಿತ ಮೊದಲಾದ ಧಾರ್ಮಿಕ ಸಂಪ್ರದಾಯಗಳ ಮುಖೇನ ಜಾನಪದ ರಂಗಭೂಮಿ ಉಗಮವನ್ನು ಕಾಣಬಹುದು. ಆರಂಭದಲ್ಲಿ ಎಲ್ಲಾ ನೃತ್ಯಗಳೂ ಮೂಲತಃ ದೇವರ ಪೂಜೆಯ ಅಂಶಗಳಿಂದ ಬೆಳೆದು ಬಂದಿವೆ. ಹೀಗಾಗಿ ಜಾನಪದ ಕ್ರಿಯಾಚರಣೆಗಳೊಂದಿಗೆ ಇವು ಬೆಳೆದುಬಂದಿವೆ. ಇವುಗಳನ್ನು ಕಲಿಸಲು ಈಗಿನಂತೆ ಹಿಂದಿನ ಕಾಲದಲ್ಲಿ ಯಾವುದೇ ಪಾಠಶಾಲೆಗಳು ಇರಲಿಲ್ಲ. ಹಿಂದೆ ಕಲಿಕೆ ಎನ್ನುವುದು ತಲೆಮಾರುಗಳಿಂದ ತಲೆಮಾರಿಗೆ ಮೌಖಿಕವಾಗಿ ಪ್ರಸಾರವಾಗುತ್ತಿತ್ತು. ಅಂದರೆ ಅನುಕರಣೆ ಮತ್ತು ವಂಶಪರಂಪರೆಯ ಕಲಿಕೆಯೇ ನೈಸರ್ಗಿಕ ಶಿಕ್ಷಣವಾಗಿತ್ತು. ಅನೇಕ ಅನುಭವಿ ಕಲಾವಿದರೂ ಜನತೆಯ ಮನೋರಂಜನೆಗಾಗಿ ಮತ್ತು ನೀತಿಯುಕ್ತ ಸಮಾಜ ನಿರ್ಮಾಣಕ್ಕಾಗಿ ಬಯಲಾಟದಂತಹ ಪ್ರದರ್ಶನ ಕಲೆಗಳನ್ನು ಸೃಷ್ಟಿಸಿದರು. ಇವುಗಳ ಮೂಲಕ ಆಡುತ್ತಲೇ ಕಲಿಯುವ ಮತ್ತು ಕಲಿಸುವ ಪ್ರಕ್ರಿಯೆ ನಡೆಯಿತು. ಇಂತಹ ರಂಗಕಲಾ ಪ್ರದರ್ಶನಗಳು ಜಾತ್ರೆ ಉತ್ಸವಗಳಂತಹ ವಿಶೇಷ ದಿನಗಳಲ್ಲಿ ಏರ್ಪಡಿಸಲಾಗುತ್ತಿತ್ತು. ಮೊದ ಮೊದಲು ಮಾನವನ ಹವ್ಯಾಸಕ್ಕಾಗಿ,

ಮನೋರಂಜನೆಗಾಗಿ ಬೆಳೆದುಬಂದ ಈ ಕಲೆಗಳು ಕಾಲಾಂತರದಲ್ಲಿ ಉಪಜೀವನದ ವೃತ್ತಿಗಳಾಗಿ ಪರಿವರ್ತನೆಗೊಂಡವು. ಈ ಎಲ್ಲಾ ಬೆಳವಣಿಗೆಗೆ ಶತಮಾನಗಳೇ ಉರುಳಿಹೋಗಿವೆ.

ಜಾನಪದ ರಂಗಭೂಮಿಯಾಗಲಿ, ಆ ಬಗೆಯ ಪ್ರಕ್ರಿಯೆಗಳಾಗಲಿ ಎಂದಿನಿಂದ ಆರಂಭಗೊಂಡವು ಎನ್ನುವುದಕ್ಕೆ ಈಗಾಗಲೇ ಹೇಳಿದಂತೆ ನಿಖರ ಮತ್ತು ನಿರ್ದಿಷ್ಟ ನಿದರ್ಶನವನ್ನು ನೀಡುವುದು ಕಷ್ಟಸಾಧ್ಯ. ಆದರೆ ಅದು ಇತ್ತು ಎನ್ನುವುದಕ್ಕೆ ನಮಗೆ ಪರೋಕ್ಷವಾದ ಅನೇಕ ಆಕರಗಳು ದೊರೆಯುತ್ತವೆ. ಅಂತಹವುಗಳಲ್ಲಿ ಕನ್ನಡ ಜಾನಪದಕ್ಕೆ ಸಂಬಂಧಿಸಿದ ಮೊದಲ ಆಕರವಾಗಿರುವ ಶಾಸನವೆಂದರೆ ಸುಮಾರು 7ನೇ ಶತಮಾನದ ಬಾದಾಮಿ ಶಾಸನ. ಈ ಶಾಸನವು ಕಪ್ಪೆಅರಭಟ್ಟ ಎನ್ನುವ ಮಹಾಪುರುಷನ ಸ್ತುತಿಪರವಾದ ಜಾನಪದ ಶೈಲಿಯ ತ್ರಿಪದಿಗಳನ್ನು ಒಳಗೊಂಡಿದೆ. ನಂತರ ಸುಮಾರು ಕ್ರಿ.ಶ 870ರಲ್ಲಿ ರಚನೆಯಾದ ಶ್ರೀವಿಜಯ ವಿರಚಿತ 'ಕವಿರಾಜ ಮಾರ್ಗ' ಕಾವ್ಯ. ಇದು ಕನ್ನಡದಲ್ಲಿ ದೊರೆತ ಮೊದಲ ಕೃತಿ. ಇದರಲ್ಲಿ 'ಪಗರಣ' ಎನ್ನುವ ಕಾವ್ಯ ಪ್ರಕಾರವನ್ನು ಕುರಿತು ಹೇಳಲಾಗಿದೆ. ಪಗರಣವೆಂಬುದು ನಾಟಕಕ್ಕೆ ಸಂಬಂಧಿಸಿದ ಮಟ್ಟು ಎಂದು ವಿದ್ವಾಂಸರು ಗುರುತಿಸಿದ್ದಾರೆ. ನಿರ್ದಿಷ್ಟ ದಾಖಲೆಗಳ ಮುಖೇನ ಜಾನಪದ ರಂಗಭೂಮಿ ಪ್ರಾಚೀನತೆಯನ್ನು ನೋಡುವುದಾದರೆ ಅದನ್ನು ಕ್ರಿ.ಶ.9ನೇ ಶತಮಾನದಿಂದ ಗುರುತಿಸಬಹುದು.

ಯಕ್ಷಗಾನ, ಬಯಲಾಟ, ದೊಡ್ಡಾಟ, ಸಣ್ಣಾಟ, ತಾಳಮದ್ದಲೆ.... ಇತ್ಯಾದಿ. ಈ ಕಲಾಪ್ರಕಾರಗಳ ಪರಿಶೀಲಿದಾಗ ಕನ್ನಡ ಸಂಸ್ಕೃತಿಯಷ್ಟೇ ಜಾನಪದ ರಂಗಭೂಮಿ ಹಳೆಯದು ಎಂದು ಹೇಳಬಹುದು. ಆ ಕಾಲದಲ್ಲಿ ರಂಗಮಂದಿರಗಳು ಇಲ್ಲದೆ ಹೋದರೂ ಅಟ್ಟಕಟ್ಟಿಕೊಂಡು ಆಟಗಳನ್ನು ಆಡಿದರು. ಉತ್ತರ ಕರ್ನಾಟಕದವರು ''ಆಟ"ಗಳನ್ನು (ದಾಸರಾಟ, ತೊಗಲಗೊಂಬೆ ಆಟ, ಬಯಲಾಟ, ಸಣ್ಣಾಟ ಮತ್ತು ದೊಡ್ಡಾಟ) ಆಡಿದರೆ, ದಕ್ಷಿಣ ಕನ್ನಡ ಜಿಲ್ಲೆಯವರು ಯಕ್ಷಗಾನದ ಪ್ರಸಂಗಗಳನ್ನು ಅಭಿನಯಿಸಿದರು. ನಾಟಕವೆಂದು ಕರೆಯಿಸಿಕೊಳ್ಳುವ ಆಟಗಳು ಪ್ರಾರಂಭವಾದ ಮೇಲೆ 'ರಂಗಭೂಮಿ' ಎಂಬ ಪದ ಚಾಲ್ತಿಗೆ ಬಂತು. ಮುಂದೆ ಈ ಆಟಗಳೇ ಜಾನಪದ ರಂಗಭೂಮಿಯೆನಿಸಿದವು. ಆದರೆ ಆಟಗಳು ಮತ್ತು ನಾಟಕಗಳಲ್ಲಿ ಸಮಾನ ಅಂಶಗಳು ಕಡಿಮೆ ಇದ್ದವು. ಆಟ ಮತ್ತು ನಾಟಕಗಳ ನೆಲೆಗಳು ಸ್ವತಂತ್ರವಾಗಿದ್ದವು. ಅವುಗಳ ತಾತ್ತ್ವಿಕ ಪಾತಳಿಗಳು ಭಿನ್ನವಾಗಿದ್ದು, ದೃಷ್ಟಿಧೋರಣೆಗಳಲ್ಲಿಯೂ ಅನೇಕ ವ್ಯತ್ಯಾಸಗಳಿದ್ದವು. ಹೀಗಾಗಿ ಇವೆರಡು ವಿಭಿನ್ನ ಮಾದರಿಗಳಾಗಿ ಬೆಳೆದವು. ಅದರಲ್ಲೊಂದು ಹವ್ಯಾಸಿ ನಾಟಕ. ಬುದ್ಧಿವಂತರು ಸೇರಿಕೊಂಡು ಮನರಂಜನೆಗಾಗಿ, ವಿಲಾಸಕ್ಕಾಗಿ ತಮಗೆ ಅನುಕೂಲವಾದಾಗ ಆಡುತ್ತಿದ್ದ ನಾಟಕಗಳು. ಮತ್ತೊಂದು ವೃತ್ತಿ ನಾಟಕ. ಇವು ಕಲಾವಿದರು ಹೊಟ್ಟೆಪಾಡಿಗಾಗಿ ಕಂಪನಿ ಕಟ್ಟಿಕೊಂಡು ಆಡುತ್ತಿದ್ದ

ನಾಟಕಗಳು ಎಂದು ಸ್ಥೂಲವಾಗಿ ಕರೆಯಬಹುದು.

**ಆಧುನಿಕ ಜಾನಪದ ರಂಗಭೂಮಿ:**

ಜಾನಪದ ಆಶಯ ಮತ್ತು ತಂತ್ರಗಳನ್ನು ಬಳಸಿಕೊಂಡು ರಚನೆಯಾಗಿ ಪ್ರಯೋಗವಾದ ನಾಟಕಗಳನ್ನು ಆಧುನಿಕ ಜಾನಪದ ನಾಟಕಗಳು ಎಂದು ನಿರ್ವಚಿಸಿಕೊಂಡಿದ್ದೇನೆ. ಕನ್ನಡ ಜಾನಪದ ಸಾಹಿತ್ಯವು ಸಂಸ್ಕೃತಿ ಪ್ರತೀಕವಾಗಿ ನಿರಂತರ ಸೃಜನಶೀಲತೆಯನ್ನು ಕಾಯ್ದುಕೊಂಡು ಬಂದಿದೆ. ಜಾನಪದ ಸಾಹಿತ್ಯ ಪ್ರಕಾರಗಳಲ್ಲಿ ನಾಟಕವು ಅನೇಕ ಅವಸ್ಥಾಂತರಗಳಲ್ಲಿ ಬೆಳೆದು ಒಂದು ಚೌಕಟ್ಟಿಗೆ ಬಂದು ಸಾಹಿತ್ಯದ ಇತರ ಪ್ರಕಾರಗಳಿಗಿಂತ ಭಿನ್ನವಾದ ಸಮೂಹ ಚಟುವಟಿಕೆಗಳನ್ನು ಅವಲಂಬಿಸಿರುವ ಕಲಾತ್ಮಕ ಅಭಿವ್ಯಕ್ತಿಯಾಗಿದೆ. ಹೀಗೆ ಕಲಾತ್ಮಕಗೊಳ್ಳುವುದರ ಜೊತೆಯಲ್ಲಿ ಆಯಾ ಸಂಸ್ಕೃತಿಗಳ ನಂಬಿಕೆ, ಬದುಕಿನ ಬಗೆಗಿನ ದೃಷ್ಟಿಕೋನ, ನಾಳಿನ ಕನಸುಗಳನ್ನೆಲ್ಲ ತಲೆಮಾರಿನಿಂದ ತಲೆಮಾರಿಗೆ ಮುಂದುವರಿಸುವ ಪ್ರವೃತ್ತಿಯು ಸೇರಿದೆ. ಈ ತರದ ಮುಂದುವರಿಕೆಗೂ ಅದರ ಸಂವಹನತೆಗೂ ನಿಕಟವಾದ ಸಂಬಂಧವಿರುತ್ತದೆ. ಜಾನಪದ ತಾನು ಕಲೆಯಾಗಿ ಅಭಿವ್ಯಕ್ತಿಸುವ ವಸ್ತುವಿನೊಡನೆ ಇಟ್ಟುಕೊಂಡ ಸಂಬಂಧ ಜೈವಿಕವಾದದ್ದು. ಅಂದರೆ ಕಲೆ ಬದುಕಿನಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲದಷ್ಟು ನಿಕಟವಾದದ್ದು. ಆಧುನಿಕ ಸಂದರ್ಭದಲ್ಲಿ ಕಲೆ ಮತ್ತು ಬದುಕಿನ ನಡುವೆ ಅಂತರಗಳು ಬೆಳೆದು ಕಲೆಯನ್ನು ಅನುಭೋಗಿ ಕ್ರಮದಲ್ಲಿ ಸ್ವೀಕರಿಸುವ ಪ್ರವೃತ್ತಿ ಬೆಳೆದು ಬಂದಿದೆ. 1819ನೇ ಶತಮಾನದಲ್ಲಿ ವಸಹಾತುಶಾಹಿ ಶಿಕ್ಷಣ ಪ್ರಭಾವದಿಂದ ಭಾರತದಾದ್ಯಂತ ಮಧ್ಯಮವರ್ಗ ಮತ್ತು ಅನಕ್ಷರಸ್ಥವರ್ಗ ಎಂಬ ಅಂತರ ಬೆಳೆದು ಬಂತು. ಮಧ್ಯಮವರ್ಗದ ಜನರು ಬ್ರಿಟಿಷ್ ಶಿಕ್ಷಣದಿಂದ ಕಲಿತ ಪಾಶ್ಚಾತ್ಯ ಸಂಸ್ಕೃತಿಯತ್ತ ಪ್ರಗತಿಯ ಕಡೆಗೆ ಕಣ್ಣುಹಾಯಿಸುತ್ತಿದ್ದರೆ, ಅನಕ್ಷರಸ್ಥ ವರ್ಗ ಇಷ್ಟೆಲ್ಲಾ ಒತ್ತಡಗಳ ನಡುವೆಯೂ ತನ್ನ ಪರಂಪರೆಯನ್ನು ಕಾಯ್ದುಕೊಂಡು ಆಧುನಿಕತೆಗೆ ಪ್ರತಿಕ್ರಿಯಿಸುವ ಅಗತ್ಯವಿತ್ತು. ಇದಕ್ಕೆ ರಂಗಭೂಮಿಯು ಹೊರತಾಗಿರಲಿಲ್ಲ.

ಇದಕ್ಕೆ ನಿದರ್ಶನವಾಗಿ ಸಂಗ್ಯಾಬಾಳ್ಯಾ ನಾಟಕವನ್ನು ನೋಡಬಹುದು. ಸಂಗ್ಯಾಬಾಳ್ಯಾ ರಚಿತವಾಗಿದ್ದು ಕ್ರಿ.ಶ. 1880ರ ಅಸುಪಾಸಿನಲ್ಲಿ. ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ ನೆಲೆಸಿದ್ದ ಪತ್ತರ ಮಾಸ್ತರ ಎಂಬಾತನು ತಾನು ಕಂಡ ನೈಜಘಟನೆಯನ್ನೇ ಆಧರಿಸಿ ಸಂಗ್ಯಾಬಾಳ್ಯಾ ನಾಟಕ ಬರೆದನೆಂದು ಹೆಚ್ಚಿನ ಮಂದಿ ಅಭಿಪ್ರಾಯಪಟ್ಟಿದ್ದಾರೆ. ಆದರೆ ಕೆ.ವಿ. ಅಕ್ಷರ ಅವರು "17ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಉತ್ತರ ಕರ್ನಾಟಕದಲ್ಲೊಂದು ಮಹತ್ವದ ಪ್ರಯೋಗ ನಡೆಯಿತು. ಆ ಭಾಗದಲ್ಲಿ ಪ್ರಚಲಿತವಿದ್ದ ಸಣ್ಣಾಟವೆಂಬ ಪ್ರಕಾರದಲ್ಲಿ ಸಾಂಪ್ರದಾಯಿಕ ಕಥಾನಕಗಳ ಬದಲು ಸಮಕಾಲೀನ ಸಮಾಜವನ್ನೇ ಬಿಂಬಿಸುವ ಸಾಮಾಜಿಕ ಬಯಲಾಟವೆಂಬ

ಹೊಸ ಚಳುವಳಿ ಉದ್ಭವವಾಯಿತು. ಇಂಥ ಬಯಲಾಟಗಳಲ್ಲಿ ಪ್ರಾಯಶಃ ಮೊದಲನೆಯದು ಮತ್ತು ಪ್ರತಿನಿಧಿಕವಾದದ್ದು ಸಂಗ್ಯಾಬಾಳ್ಯಾ ಎಂಬ ಕೃತಿ. ಜಾತ್ರ, ಸೌಟಂಕಿ, ತಮಾಷಾ ಮೊದಲಾದ ರಂಗ ಪ್ರಕಾರಗಳನ್ನು ತಮ್ಮ ರಂಗಾಂಶಗಳಲ್ಲಿ ಏನೆಲ್ಲಾ ಸಮಕಾಲೀನತೆಯ ಪ್ರಯೋಗವನ್ನು ನಡೆಸಿದ್ದವೋ ಅದೆಲ್ಲವನ್ನೂ ತನ್ನ ನಾಟಕ ಕೃತಿಯಲ್ಲಿ ಸಾಧಿಸಿದ ಹೆಗ್ಗಳಿಕೆ ಸಂಗ್ಯಾಬಾಳ್ಯಾಕ್ಕೆ ಸಲ್ಲಬೇಕು''.(ಅಕ್ಷರ.ಕೆ.ವಿ., 1994:188) ಎಂದಿದ್ದಾರೆ. ಅಂದರೆ ಜಾನಪದ ರಂಗಭೂಮಿಯ ಎಲ್ಲಾ ಲಕ್ಷಣಗಳನ್ನು ಹೋಲುವ ಸಂಗ್ಯಾಬಾಳ್ಯಾ ನಾಟಕವು ಜಾನಪದ ಕಥೆಯಾಗಿದ್ದರೂ ಕಾಲಘಟ್ಟದ ಒತ್ತಡದಿಂದ ಪಡೆದುಕೊಂಡ ಸಾಮಾಜಿಕ ಸ್ವರೂಪ ಆಧುನಿಕ ಜಾನಪದ ರಂಗಭೂಮಿಗೆ ಉತ್ತಮ ನಿದರ್ಶನವಾಗಿದೆ. ಪರಿಣಾಮವಾಗಿಯೇ ಸಂಗ್ಯಾಬಾಳ್ಯಾ ನಾಟಕ ಪಾರಂಪರಿಕ ಸತ್ವಗಳನ್ನೆಲ್ಲ ಉಳಿಸಿಕೊಂಡು ವರ್ತಮಾನದ ವಸಾಹತುಶಾಹಿ ಪ್ರಭಾವಕ್ಕೆ ಭಿನ್ನವಾದ ಪ್ರತಿಕ್ರಿಯೆ ತೋರಿಸಿತು. ಈ ಬಗೆಯ ತಾತ್ವಿಕ ಪಲ್ಲಟಗಳನ್ನೇ ಆಧುನಿಕ ಜಾನಪದ ರಂಗಭೂಮಿ ಎಂದುಕೊಳ್ಳಬಹುದು.

ಕರ್ನಾಟಕ ಜಾನಪದ ರಂಗಭೂಮಿಗೆ ಸಂಬಂಧಿಸಿದಂತೆ ಶ್ರೀಕೃಷ್ಣ ಪಾರಿಜಾತದ ರಚನೆ ಚಾರಿತ್ರಿಕವಾಗಿ ಬಹಳ ಸಂಕೀರ್ಣವಾದ ಕಾಲವಾಗಿದೆ. ಈ ಕಾಲಕ್ಕಾಗಲೇ ಇಡೀ ಕರ್ನಾಟಕದ ತುಂಬಾ ವಸಾಹತುಶಾಹಿ ಆಡಳಿತ ಪದ್ಧತಿ ಜಾರಿಗೆ ಬಂದಿತ್ತು. ವೃತ್ತಿರಂಗಭೂಮಿಯ ಉಗಮದಿಂದ ಜಾನಪದ ಕಲೆ ಒಂದರ್ಥದಲ್ಲಿ ಪರಿಷ್ಕೃತಗೊಂಡು ಆಧುನಿಕತೆಯನ್ನು ಸಾರುತ್ತಿತ್ತು. ಪಾರ್ಸಿ ಕಂಪನಿಗಳು ಈಗಾಗಲೇ ಕಂಪನಿ ನಾಟಕಗಳನ್ನು ರಂಗಕ್ಕೆ ತಂದಿದ್ದವು. ಇಂಥ ಸಂಕೀರ್ಣ ಸಂದರ್ಭದಲ್ಲಿ ಜಾನಪದ ನಾಟಕಗಳು ತಮ್ಮ ಅಸ್ತಿತ್ವವನ್ನು ಸಾಂಸ್ಕೃತಿಕವಾಗಿ ಮತ್ತೆ ಪುನಃ ಸ್ಥಾಪಿಸುವ ಅಗತ್ಯವಿತ್ತು. ಈ ಕಾರಣಕ್ಕಾಗಿ ಪಾರಿಜಾತ ತನ್ನ ಜಾನಪದ ಸತ್ವಗಳನ್ನೆಲ್ಲಾ ಒಳಗೊಂಡಂತೆ ಅಂದಿನ ಪ್ರೇಕ್ಷಕರ ಅಭಿರುಚಿಗೆ ಅನುಗುಣವಾಗಿ, ಕಂಪನಿ ನಾಟಕಗಳಿಗೆ ಸಿಗುತ್ತಿದ್ದ ಮನ್ನಣೆಗಳು ಇತ್ಯಾದಿಗಳೆಲ್ಲಾ ಗಮನಿಸಿ ರಂಗಸಾಧ್ಯತೆಯ ಪರಿಕರಗಳನ್ನು ಬಳಸಿಕೊಂಡು ತನ್ನ ಪರಂಪರೆಯನ್ನು ಉಳಿಸಿಕೊಂಡು ಹೊಸ ರೂಪ ತಾಳುವ ಅವಶ್ಯಕತೆಯಿತ್ತು. ಸಂಗ್ಯಾಬಾಳ್ಯಾ ಮತ್ತು ಪಾರಿಜಾತ ನಾಟಕಗಳ ಮಹತ್ವವಿರುವುದೇ ಇಲ್ಲಿ. ಇವು ಸೃಷ್ಟಿಸಿದ ಪರಂಪರೆ ಆಧುನಿಕ ಕನ್ನಡ ಜಾನಪದ ನಾಟಕಗಳವರೆಗೂ ಹರಿದು ಬಂದಿವೆ. ಪಾರಿಜಾತ ಬಯಲಾಟವಾಗಿ ಪ್ರಸಿದ್ಧಿ ಪಡೆಯುವುದಕ್ಕೆ ಕುರಗೋಡ ತಮ್ಮಣ್ಣನು ಎಷ್ಟು ಕಾರಣನೋ ಕೌಜಲಗಿ ನಿಂಗಮ್ಮಳೂ ಅಷ್ಟೇ ಕಾರಣಳು ಎಂಬುದನ್ನು ಮರೆಯುವಂತಿಲ್ಲ. ಅದರಂತೆ ನಾಟಕ ಕಂಪನಿಗಳೂ ಸಹ ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಮೆಚ್ಚುಗೆಯಾಗುವ ಜಾನಪದ ವಸ್ತುಗಳನ್ನುಳ್ಳ ನಾಟಕಗಳನ್ನು ಆಧುನಿಕ ರಂಗ ಪರಿಕರಗಳೊಂದಿಗೆ ಪ್ರಯೋಗಗೊಳಿಸಿದರು. ಇದಕ್ಕೆ ಪೂರಕವಾಗಿ ಕಂಚಿಕೇರಿ ಶಿವಣ್ಣನವರ ಅನುಭವವನ್ನು ನೋಡಬಹುದು. ''ಕಂಚಿಕೇರಿ ಕೊಡ್ರಬಸಪ್ಪನವರು

ಸ್ಥಾಪಿಸಿದ ಶ್ರೀ ಜಯಲಕ್ಷ್ಮಿ ನಾಟಕ ಸಂಘ. 1918ರ ಸುಮಾರಿಗೆ ಶ್ರೀ ಶಬ್ದಮಣಿ ಕೊಟ್ರಯ್ಯ ಹಾಗೂ ಶ್ರೀ ಜ್ಯೋತಿ ಕರಿಯಪ್ಪನವರ ಸಹಕಾರದೊಂದಿಗೆ ಹಿರೇಹಡಗಲಿಯಲ್ಲಿ ಶ್ರೀ ಜಯಲಕ್ಷ್ಮಿ ಪ್ರಾಸಾದಿಕ ನಾಟಕ ಮಂಡಳಿಯನ್ನು ಕಂಚಿಕೇರಿ ಕೊಟ್ರಬಸಪ್ಪನವರು ಆರಂಭಿಸುತ್ತಾರೆ. 'ರಾಮಕೊರವಂಜಿಕೃಷ್ಣ ಕೊರವಂಜಿ' ನಾಟಕವೇ ಅವರ ಕಂಪನಿಯ ಪ್ರಥಮ ಜಾನಪದ ನಾಟಕ. ಸ್ಥಳೀಯವಾಗಿ ಲಭ್ಯವಿದ್ದ ರಂಗ ಪರಿಕರಗಳ ನೆರವಿನೊಂದಿಗೆ ಕಂಪನಿ ಆರಂಭಿಸುತ್ತಾರೆ"ಎಂದು ಹೇಳಲಾಗಿದೆ. (ಮಲ್ಲಿಕಾರ್ಜುನ ಕಡಕೋಳ, 2016:1)

ಹಾಗೆಯೇ ಹೈದರಾಲಿಟಿಪ್ಪೂಸುಲ್ತಾನ್ ಕಾಲಾವಧಿಯ ಘಟನೆಗಳಿಂದ ಚಾರಿತ್ರಿಕ ಮಹತ್ವ ಪಡೆದಿರುವ ದಂಡಿನ ಹಿರೇಹಾಳು ಸ್ಥಳೀಯ ಶ್ರೀಮಂತರಾದ ಶೆಟ್ರು ಮನೆತನದವರ ಆಶ್ರಯದಲ್ಲಿ ಅಬ್ಬಿಗೇರಿಯಿಂದ ಇಲ್ಲಿಗೆ ವಲಸೆ ಬಂದಿದ್ದ ಹಿರೇಮಠದವರ ಕಲಾಸಕ್ತಿಯನ್ನು ರಂಗಚಟುವಟಿಕೆಗಳು 1835ರಲ್ಲಿಯೇ ಆರಂಭವಾದವು. ಹಿರೇಹಾಳು ಶೆಟ್ರು ಮನೆತನದ ಸಿದ್ಧರಾಮಪ್ಪ ಮತ್ತು ಅಬ್ಬಿಗೇರಿ ಹಿರೇಮಠದ ಮಹಾಂತಯ್ಯ ಈ ಜಿಲ್ಲೆಯ ರಂಗ ಇತಿಹಾಸದ ಪೀಠಿಕೆಯನ್ನು ಬರೆದರು. ಗೊಂಬೆಯಾಟದ ಮೂಲಕ ಆರಂಭಿಸಿ, ಬಯಲಾಟಗಳಲ್ಲಿ ತೊಡಗಿ, ನಾಟಕಗಳ ಮೂಲಕ ಮುಂದುವರೆಯಿತು. ಮಹಾಂತಯ್ಯನವರ ಧುರೀಣತ್ವವು ಸುತ್ತಲಿನ ಕಲಾಸಕ್ತರನ್ನು ಕೂಡಿಸಿ ಹಂತ ಹಂತವಾಗಿ ಕ್ರೋಡೀಕರಣಗೊಂಡ ಪರಿಣಾಮವಾಗಿ 1835ರಲ್ಲಿ 'ಶ್ರೀ ಬಾಲಲೀಲಾ ವಿನೋದ ಸಂಗೀತ ನಾಟಕ ಮಂಡಳಿ' ಸ್ಥಾಪನೆಯಾಯಿತು. ಮಹಾಂತಯ್ಯನವರು ಕವಿಗಳಾಗಿದ್ದರಿಂದ ನಾಟಕ ದೃಶ್ಯ ಜೋಡಣೆ, ಪದ್ಯರಚನೆ ಮಾಡುತ್ತಿದ್ದರು. ಸಿದ್ಧರಾಮಪ್ಪನವರು ಪೋಷಕರು, ನಟರೂ ಆಗಿದ್ದರಿಂದ 'ನಾಟಕ ಮಂಡಳಿ'ಗೆ ಯಾವುದೇ ಮುಗ್ಗಟ್ಟುಗಳುಂಟಾಗಿರಲಿಲ್ಲ.

ಇದೇ ಮಾದರಿಯ ನಾಟಕಗಳು ಕರ್ನಾಟಕದ ಭಿನ್ನ ಪ್ರದೇಶಗಳಲ್ಲಿ ಆಗಾಗ್ಗೆ ಪ್ರದರ್ಶನಗೊಂಡದ್ದುಂಟು. ಪರಿಕಲ್ಪನೆಯ ಹಿನ್ನೆಲೆಯಲ್ಲಿ ನೋಡಿದಾಗ ಜಾನಪದ ಮೂಲದಿಂದ ರಚಿತವಾದ ಕಂಬಾರರ 'ಜೋಕುಮಾರ ಸ್ವಾಮಿ' ಕಾರಂತರ ನಿರ್ದೇಶನದಿಂದಾಗಿ ರಂಗಭೂಮಿಯಲ್ಲಿ ಹೊಸ ಅಲೆಯನ್ನೇ ಸೃಷ್ಟಿಸಿತು. ಪ್ರದರ್ಶನದ ಸಂದರ್ಭದಲ್ಲಿ ಪಾತ್ರಧಾರಿಗಳು ಪ್ರೇಕ್ಷಕರ ಮಧ್ಯದಿಂದಲೇ ನಡೆದುಕೊಂಡು ಹೋಗಿ ವೇದಿಕೆ ಹತ್ತುತ್ತಿದ್ದುದು ಅಂದಿನ ನೋಡುಗರಿಗೆ ಹೊಸ ಅನುಭವ. ಆದರೆ ಜನಪದರಲ್ಲಿ ಇದು ಬಹುಕಾಲದಿಂದಲೂ ನಡೆದುಕೊಂಡು ಬಂದಿರುವಂತಹದ್ದು. ಈ ಬಗೆಯ ಪರಂಪರೆ ಮತ್ತು ವರ್ತಮಾನದ ಪ್ರಯೋಗಗಳ ಮೇಳೈಸುವಿಕೆಯೇ ಆಧುನಿಕ ಜನಪದ ರಂಗಭೂಮಿಯ ಭಿನ್ನತೆಗೆ ಕಾರಣವಾಗಿದೆ. ಈ ಬಗೆಯ ರಂಗ ಪ್ರಯೋಗಗಳು ವಸಾಹತೋತ್ತರ ಕಾಲಘಟ್ಟದಲ್ಲಿ ಗಿರೀಶ ಕಾರ್ನಾಡ, ಚಂದ್ರಶೇಖರ ಕಂಬಾರ, ಎಂ.ಎಂ.ಕಲಬುರ್ಗಿ ಮುಂತಾದವರ ರಚನೆಗಳನ್ನು ನೋಡಬಹುದು.

**ಪರಾಮರ್ಶನ ಗ್ರಂಥಗಳು:**


1. ಅಕ್ಷರ ಕೆ.ವಿ., (2018), ಮಾವಿನ ಮರದಲ್ಲಿ ಬಾಳೆಯ ಹಣ್ಣು, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
2. ಅಕ್ಷರ ಕೆ.ವಿ., (2009), ರಂಗಭೂಮಿಯ ಮುಖಾಂತರ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
3. ಎನ್ಕೆ, (2001), ಉತ್ತರ ಕರ್ನಾಟಕದ ರಂಗಭೂಮಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ಗುಡಿಹಳ್ಳಿ ನಾಗರಾಜ, (2000), ರಂಗನಾಟಕ, ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು.
5. ಜೋಳದರಾಶಿ ದೊಡ್ಡನಗೌಡ, (1998), ನಂದೇ ನಾನೋದಿದೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
6. ಧೂಪದ ಎಂ.ಟಿ., (2010), ಕನ್ನಡ ಜನಪದ ರಂಗ ಪರಂಪರೆ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
7. ಮಲ್ಲಿಕಾರ್ಜುನ ಕಡಕೋಳ, (2016), ಕಂಚಿಕೇರಿ ಶಿವಣ್ಣ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು.
8. ಮೃತ್ಯುಂಜಯ ರುಮಾಲೆ, (2012), ಸಿಡಿಗಿನಮಳೆ ವೈ. ಎಂ. ಚಂದ್ರಯ್ಯನವರು, ಲಿಂಗಾಯತ ಅಧ್ಯಯನ ಸಂಸ್ಥೆ, ಡಂಬಳ, ಗದಗ.
9. ರಂಗನಾಥ. ಎಚ್.ಕೆ., (2007), ಕನ್ನಡ ರಂಗಭೂಮಿ ವಿಕಾಸ, ಸಂಸ್ಕೃತಿ ಬುಕ್ ಏಜನ್ಸೀಸ್, ಬೆಂಗಳೂರು.
10. ರಾಮಕೃಷ್ಣ ಮರಾಠೆ, (1999), ಕೊಣ್ಣೂರು ನಾಟಕ ಕಂಪನಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
11. ವೈಕುಂಠರಾಜು. ಬಿ.ವಿ., (1997), ಕನ್ನಡ ರಂಗಭೂಮಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
12. ವೆಂಕಟಗಿರಿ ದಳವಾಯಿ, (2003), ಕನ್ನಡ ರಂಗಭೂಮಿ ಮತ್ತು ಮಹಿಳೆ, ಕನಕ ಸಾಹಿತ್ಯ ಪ್ರತಿಷ್ಠಾನ (ನೋ), ಬೆಂಗಳೂರು.
13. ವೆಂಕಟೇಶ ಇಂದ್ವಾಡಿ, (2012), ಆಧುನಿಕ ಜನಪದ ರಂಗಭೂಮಿ ಸ್ವರೂಪ ಸಂರಚನೆ, ಕಂಸಳೆ ಪ್ರಕಾಸನ, ಮೈಸೂರು.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.